**FEBRUARY 06, 2025**

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- ‘ನರೇಗಾ ಹಬ್ಬ’; ಚಿಕ್ಕಬಳ್ಳಾಪುರದ ಮಂಡಿಕಲ್ಲು, ರಾಜ್ಯದ ಅತ್ಯುತ್ತಮ ಗ್ರಾಮ ಪಂಚಾಯ್ತಿ ಪುರಸ್ಕಾರಕ್ಕೆ ಭಾಜನ.
- ‘ಗಾಂಧಿ ಭಾರತ’; ಅಕ್ಟೋಬರ್ 2, ಗಾಂಧಿ ಜಯಂತಿ ವರೆಗೆ, 28 ವಿಶೇಷ ಕಾರ್ಯಕ್ರಮಗಳಿಗೆ, ರಾಜ್ಯ ಸರ್ಕಾರದಿಂದ ಚಾಲನೆ.
- ಭಾವ ಧ್ವನಿಸಬಲ್ಲ, ವಿಶೇಷ ಕನ್ನಡ ತಂತ್ರಾಂಶ ಹಾಗೂ ಲಿಪಿಗಳ ವಿನ್ಯಾಸಕ್ಕೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಸಿದ್ಧತೆ.
- ರಾಷ್ಟ್ರೀಯ ರಸ್ತೆ ಸುರಕ್ಷತೆ ಜಾಗೃತಿ ಮಾಸಾಚರಣೆ; ಧಾರವಾಡ ಜಿಲ್ಲೆಗೆ, ರಸ್ತೆ ಅಪಘಾತದಲ್ಲಿ, ರಾಜ್ಯಕ್ಕೆ 15ನೇ ಸ್ಥಾನ.

<><><>

**ಈಗ ವಾರ್ತೆಗಳ ವಿವರ**

<><><>

‘ಮಹಾತ್ಮ ಗಾಂಧಿ ನರೇಗಾ ಯೋಜನೆ’ ಅನು ್ಠಾನದಲ್ಲಿ, ಚಿಕ್ಕಬಳ್ಳಾಪುರ ತಾಲೂಕಿನ, ಹೋಬಳಿ ಕೇಂದ್ರ ಮಂಡಿಕಲ್ಲು, ರಾಜ್ಯ ಮಟ್ಟದ ಅತ್ಯುತ್ತಮ ಗ್ರಾಮ ಪಂಚಾಯ್ತಿ ಪುರಸ್ಕಾರಕ್ಕೆ ಭಾಜನವಾಗಿದೆ. ಬೆಂಗಳೂರಿನ ವಸಂತ ನಗರದ, ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ, ‘ನರೇಗಾ ಹಬ್ಬ’ದಲ್ಲಿ ಗ್ರಾಮೀಣಾಭಿವೃದ್ಧಿ ಖಾತೆ ಸಚಿವ ಪ್ರಿಯಾಂಕ್ ಖರ್ಗೆ, ಪ್ರಶಸ್ತಿ ನೀಡಿ ಗೌರವಿಸಿದರು. ಮಂಡಿಕಲ್ಲು ಗ್ರಾಮ ಪಂಚಾಯ್ತಿ ತನ್ನ ವ್ಯಾಪ್ತಿಯ, 9 ಕಂದಾಯ ಗ್ರಾಮಗಳು ಹಾಗೂ 4 ಮಜಿರೆ ಗ್ರಾಮಗಳಲ್ಲಿ, 2023–24ನೇ ಸಾಲಿನಲ್ಲಿ ಉದ್ಯೋಗ ಖಾತ್ರಿ ಯೋಜನೆ ಅಡಿ, 40 ಸಾವಿರದ 448 ಮಾನವ ದಿನಗಳನ್ನು ಸೃಜಿಸಿ, ಗಮನ ಸೆಳೆದಿದೆ.

<><><>

ವಯಕ್ತಿಕ ಫಲಾನುಭವಿ ವಿಭಾಗದಲ್ಲಿ, ಚಿಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿ ತಾಲೂಕಿನ, ಇರಗಂಪಲ್ಲಿ ಗ್ರಾಮದ ಪ್ರಯೋಗಶೀಲ ಕೃಷಿಕ, ಚಿಕ್ಕ ವೆಂಕಟರಮಣಪ್ಪ ರಾಜ್ಯ ಪ್ರಶಸ್ತಿ ಪಡೆದರು.

<><><>

ಅಥಿತಿಯಾಗಿ ಪಾಲ್ಗೊಂಡಿದ್ದ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಮಾತನಾಡಿ, ಗ್ರಾಮಗಳ ಅಭಿವೃದ್ಧಿಯಿಂದ ಮಾತ್ರ ರಾಜ್ಯದ ಅಭಿವೃದ್ಧಿ ಸಾಧ್ಯ. ಗ್ರಾಮೀಣ ಜನರ ಜೀವನಮಟ್ಟ ಸುಧಾರಣೆಯಲ್ಲಿ, ನರೇಗಾ ಯೋಜನೆಯ ಪಾತ್ರ ಮಹತ್ವದಾಗಿದೆ. ಮಾದರಿ ರಾಜ್ಯವನ್ನು ರೂಪಿಸುವಲ್ಲಿ ಸರ್ಕಾರ ಶ್ರಮಿಸುತ್ತಿದೆ ಎಂದರು.

<><><>

ಅಕ್ಟೋಬರ್ 2, ಗಾಂಧಿ ಜಯಂತಿ ವರೆಗೆ, 'ಗಾಂಧಿ ಭಾರತ ಕಾರ್ಯಕ್ರಮ' ಜರುಗಲಿದ್ದು, 28 ಬಗೆಯ ಕಾರ್ಯಕ್ರಮಗಳನ್ನು ರಾಜ್ಯ ಸರ್ಕಾರ ಯೋಜಿಸಿದೆ ಎಂದು, ಪ್ರವಾಸೋದ್ಯಮ ಖಾತೆ ಸಚಿವ ಎಚ್.ಕೆ. ಪಾಟೀಲ ತಿಳಿಸಿದ್ದಾರೆ. ಬೆಳಗಾವಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಗೋಕಾಕ ಜಲಪಾತದಲ್ಲಿ, 'ರೋಪ್ ಕಾರ್' ಯೋಜನೆ ಸಿದ್ಧಪಡಿಸಲಾಗುತ್ತಿದೆ. ಭೀಮಗಡ ಅರಣ್ಯದಲ್ಲಿ, 18 ಕಿಲೋ ಮೀಟರ್ ಸಫಾರಿಗಾಗಿ ಮುಕ್ತಗೊಳಿಸಲಾಗುತ್ತಿದೆ ಎಂದು ಹೇಳಿದರು. ಸವದತ್ತಿಯ ಶ್ರೀ ಯಲ್ಲಮ್ಮನ ಗುಡ್ಡದ ಅಭಿವೃದ್ಧಿಗೆ, ಕೇಂದ್ರ ಸರ್ಕಾರ ನೂರು ಕೋಟಿ ರೂಪಾಯಿ, 20 ಕೋಟಿ ರೂಪಾಯಿ ಪ್ರಸಾದ ಯೋಜನೆಯಡಿ ಸಹ ಮಂಜೂರಾಗಿದೆ. ತಿರುಪತಿ ತಿರುಮಲ ದೇವಸ್ಥಾನದ ಮಾದರಿಯಲ್ಲಿ, ದಾಸೋಹ ಮತ್ತು ಮೇವು ಭವನ ನಿರ್ಮಾಣವಾಗಲಿದೆ ಎಂದರು.

<><><>

ಆಕಾಶವಾಣಿ ಮೈಸೂರು ಕೇಂದ್ರಕ್ಕೆ, 90 ವರ್ಷ ತುಂಬಿರುವ ಹಿನ್ನೆಲೆ, ಭಾವ ಜಾನಪದ ರಂಗ ಕಾರ್ಯಕ್ರಮ, ನಾಳೆ ಬೆಳಗ್ಗೆ 10 ಗಂಟೆಗೆ, ಮಂಡ್ಯ ನಗರದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ ಆಯೋಜಿಸಲಾಗಿದೆ. ಆಕಾಶವಾಣಿ ಮೈಸೂರು ಕೇಂದ್ರದ ಉಪ ನಿರ್ದೇಶಕ, ಎಸ್.ಎಸ್.ಉಮೇಶ್ ಮಂಡ್ಯದಲ್ಲಿ, ಸುದ್ದಿಗೋಷ್ಠಿ ನಡೆಸಿ, ವಿವರ ನೀಡಿದರು.

<><><>

ಎಸ್.ಎಸ್. ಉಮೇಶ ಧ್ವನಿ 50 ಸೆಕೆಂದುಗಳು

<><><>

ಆಕಾಶವಾಣಿ ಭದ್ರಾವತಿ ಕೇಂದ್ರ, ವಜ್ರ ಮಹೋತ್ಸವ ಸಂಭ್ರಮದಲ್ಲಿದೆ. 1965ರಲ್ಲಿ ಪ್ರಸಾರ ಕಾರ್ಯವನ್ನಾರಂಭಿಸಿದ, ಈ ಕೇಂದ್ರ, ನಾಳೆಗೆ 60 ವರ್ಷಗಳನ್ನು ಪೂರೈಸಲಿದೆ. ಅನೇಕ ವಿಶೇಷ ಕಾರ್ಯಕ್ರಮಗಳು ಆಯೋಜಿತವಾಗಿವೆ. ಈ ಕುರಿತು ಪ್ರದೇಶ ಸಮಾಚಾರಕ್ಕಾಗಿ ಹೆಚ್ಚಿನ ಮಾಹಿತಿ ನೀಡಿದ್ದಾರೆ, ಕೇಂದ್ರದ ಕಾರ್ಯಕ್ರಮ ಮುಖ್ಯಸ್ಥ ಎಸ್.ಆರ್.ಭಟ್.

<><><>

ಎಸ್.ಆರ್.ಭಟ್. ಧ್ವನಿ 50 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ **x** ಖಾತೆ **@airnews_dharwad** ಹಾಗೂ

ನಮ್ಮ ಫೇಸ್ಬುಕ್ ಖಾತೆ **Airrnu Dharwad** ಅನುಸರಿಸಿ.

<><><>

6 ಸಾವಿರದ 395 ಆನೆಗಳನ್ನು ಹೊಂದಿರುವ ಕರ್ನಾಟಕ, ದೇಶದಲ್ಲೇ ಅಗ್ರಸ್ಥಾನದಲ್ಲಿದೆ. ಹೀಗಾಗಿ, ಆನೆ–ಮಾನವ ಸಂಘರ್ಷ ಸಹ ಕಾಡಂಚಿನಲ್ಲಿ ಹೆಚ್ಚುತ್ತಿದೆ. ಇದನ್ನು ನಿರ್ವಹಿಸಲು, ಆನೆಗಳಿಗೆ ದೇಸಿ ರೇಡಿಯೋ ಕಾಲರ್ ಅಳವಡಿಸಲಾಗುತ್ತಿದೆ ಎಂದು, ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ. 'ವೆಚ್ಚ ದಕ್ಷ ಕರ್ನಾಟಕ ಪರಿಶೋಧಿತ ಪತ್ತೆ ಸಾಧನ' ರೇಡಿಯೋ ಕಾಲರ್‌ಗಳನ್ನು ಬಂಡಿಪುರ ಮತ್ತು ನಾಗರಹೊಳೆ ಹುಲಿ ಸಂರಕ್ಷಿತ ಅರಣ್ಯ ಪ್ರದೇಶದ ಅಧಿಕಾರಿಗಳಿಗೆ, ಬೆಂಗಳೂರಿನಲ್ಲಿ ಹಸ್ತಾಂತರಿಸಿ, ಮಾತನಾಡಿದರು. ಕೊಡಗು, ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳಲ್ಲಿ, ಗುಂಪಿನ ನೇತೃತ್ವ ವಹಿಸುವ, ಹಿರಿಯ ಹೆಣ್ಣಾನೆಗಳಿಗೆ ಆದ್ಯತೆ ಮೇಲೆ, ಕಾಲರ್ ಅಳವಡಿಸಲಾಗುವುದು ಎಂದು, ಸಚಿವರು ಹೇಳಿದರು.

<><><>

ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ತಂತ್ರಾಂಶದ ಒತ್ತಕ್ಷರಗಳ ಲೋಪ ಮತ್ತು ಭಾಷಾಂತರ ಅಪಭ್ರಂಷ ಸರಿ ಪಡಿಸಲು ಮುಂದಾಗಿದೆ. ಕನ್ನಡದ ಹೊಸ ಅಕ್ಷರ ತಂತ್ರಾಂಶದ ರಚನೆ ಹಾಗೂ ದೋಷವಿಲ್ಲದ ಬಳಕೆ ಬಗ್ಗೆ, ತಂತ್ರಾಂಶ ತಜ್ಞರೊಂದಿಗೆ ಸಮಾಲೋಚಿಸಿ, ಶೀಘ್ರ ಬಿಡುಗಡೆಗೊಳಿಸಲಿದೆ ಎಂದು, ಪ್ರಾಧಿಕಾರದ ಅಧ್ಯಕ್ಷ ಪ್ರೊಫೆಸರ್ ಪುರುಷೋತ್ತಮ ಬಿಳಿಮಲೆ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

ಪುರುಷೋತ್ತಮ ಬಿಳಿಮಲೆ ಧ್ವನಿ 50 ಸೆಕೆಂದುಗಳು

<><><>

ರಸ್ತೆ ಸುರಕ್ಷತೆ ಖಾತ್ರಿ ಮತ್ತು ಅಪಘಾತ ಪ್ರಮಾಣವನ್ನು ಶೂನ್ಯಕ್ಕಿಳಿಸುವ ಜವಾಬ್ದಾರಿ, ಪ್ರತಿಯೊಬ್ಬ ನಾಗರಿಕನದು ಎಂದು, ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ್ ಲಾಡ್ ಹೇಳಿದ್ದಾರೆ. ಹುಬ್ಬಳ್ಳಿಯ ವಿದ್ಯಾನಗರದ ಬಿ.ವಿ.ಬಿ. ತಾಂತ್ರಿಕ ಮಹಾವಿದ್ಯಾಲಯದಲ್ಲಿ, ರಾಷ್ಟ್ರೀಯ ರಸ್ತೆ ಸುರಕ್ಷತೆ ಜಾಗೃತಿ ಮಾಸಾಚರಣೆ – 2025ರ ಅಂಗವಾಗಿ, ವಾಹನ ಜಾಥಾಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು. ದ್ವಿಚಕ್ರ ವಾಹನಗಳಲ್ಲಿ ಸಂಚರಿಸುವ ಯುವಜನರ ಪೈಕಿ, ಶೇಕಡ 22 ರಷ್ಟು ಯುವಜನರು, ರಸ್ತೆ ಅಪಘಾತದಲ್ಲಿ ಮರಣ ಹೊಂದುತ್ತಿದ್ದಾರೆ. ನಿತ್ಯ ಅಪಘಾತಗಳಲ್ಲಿ, 280 ಜನ ಸಾವಿಗೀಡಾಗುತ್ತಿದ್ದಾರೆ ದೇಶದ ಶೇಕಡ 1 ರಷ್ಟು ಜಿ.ಡಿ.ಪಿ. ಕುಸಿತವಾಗಲು ಕಾರಣವಾಗಿದೆ. ರಸ್ತೆ ಸುರಕ್ಷತಾ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದರು.

<><><>

ಶಾಸಕ ಮಹೇಶ ಟೆಂಗಿನಕಾಯಿ ಮಾತನಾಡಿ, ರಸ್ತೆ ಅಪಘಾತದಲ್ಲಿ ಧಾರವಾಡ ಜಿಲ್ಲೆ ರಾಜ್ಯದಲ್ಲಿ 15ನೇ ಸ್ಥಾನದಲ್ಲಿದೆ ಎಂಬುದು, ವಿಷಯದ ಗಂಭೀರತೆಯನ್ನು ತಿಳಿಸುತ್ತದೆ ಎಂದರು.

<><><>

ಯಾದಗಿರಿ ಜಿಲ್ಲೆ, ಸುರಪುರ ತಾಲೂಕಿನ, ತಿಂಥಣಿ ಸೇತುವೆ ಕ್ರಾಸ್ ಸಮೀಪ, ಬಸ್ ಹಾಗೂ ದ್ವಿಚಕ್ರ ವಾಹನದ ಮಧ್ಯೆ ಸಂಭವಿಸಿದ ಅಪಘಾತದಲ್ಲಿ, ದಂಪತಿ ಸೇರಿ, ಮೂರು ಮಕ್ಕಳು ಸ್ಥಳದಲ್ಲಿಯೇ ಮೃತಪಟ್ಟ ಘಟನೆ, ವರದಿಯಾಗಿದೆ. ಶಹಾಪುರ ತಾಲೂಕಿನ ಹಳೆ ಸಗರದ ಆಂಜನೇಯ, ಲಿಂಗಸೂಗೂರಿಗೆ ಜಾತ್ರೆ ನಿಮಿತ್ತ, ಕುಟುಂಬ ಸಮೇತ ದ್ವಿ ಚಕ್ರ ವಾಹನದಲ್ಲಿ ತೆರಳುತ್ತಿದ್ದರು ಎಂದು, ಸುರಪುರ ಪೊಲೀಸರು ತಿಳಿಸಿದ್ದಾರೆ.

<><><>

ಉತ್ತರಾಖಂಡ ರಾಜ್ಯದ, ಡೆಹೆರಾಡೂನ್‌ನ ಹಲ್ದ್ವಾನಿಯಲ್ಲಿ ಆಯೋಜಿತ, 38ನೇ ರಾಷ್ಟ್ರೀಯ ಕ್ರೀಡಾಕೂಟದಲ್ಲಿ, 28 ಚಿನ್ನ, 12 ಬೆಳ್ಳಿ, 13 ಕಂಚಿನ ಪದಕಗಳೊಂದಿಗೆ, ಕರ್ನಾಟಕ ಪದಕ ಪಟ್ಟಿಯಲ್ಲಿ, ಅಗ್ರ ಸ್ಥಾನ ಕಾಯ್ದುಕೊಂಡಿದೆ. ಕರ್ನಾಟಕದ ಕ್ರೀಡಾಪಟುಗಳು, ಇದು ವರೆಗೆ ಒಟ್ಟು 53 ಪದಕಗಳನ್ನು ಗೆದ್ದಿದ್ದಾರೆ. ಈಜುಕೊಳದಲ್ಲಿ ಪಾರಮ್ಯ ಮೆರೆದಿರುವ ರಾಜ್ಯದ ಈಜುಪಟುಗಳು, ಒಟ್ಟು 22 ಚಿನ್ನದ ಪದಕ ಜಯಿಸಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ, ರಾಜ್ಯದ 31 ಜಿಲ್ಲೆಗಳಲ್ಲಿ ಸವಿತಾ ಮಹರ್ಷಿ ಜಯಂತ್ಯುತ್ಸವ ಕಾರ್ಯಕ್ರಮ, ಶ್ರದ್ಧಾ, ಭಕ್ತಿಯಿಂದ ಆಚರಿಸಿದ ವರದಿಗಳು ಬಂದಿವೆ.

<><><>

ಇದೇ 22 ಹಾಗೂ 23ರ ವರೆಗೆ ಆಯೋಜಿತ, ರನ್ನ ವೈಭವದ ಹಿನ್ನೆಲೆ, ಮುಧೋಳ ನಗರವನ್ನು ಶೃಂಗರಿಸಲು, ಒಂದು ಕೋಟಿ ರೂಪಾಯಿ ಅನುದಾನ ಬಿಡುಗಡೆ ಮಾಡಲಾಗಿದೆ ಎಂದು, ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ತಿಳಿಸಿದ್ದಾರೆ.

<><><>

ಧಾರವಾಡ ಜಿಲ್ಲೆ, ಹುಬ್ಬಳ್ಳಿ ಹಾಗೂ ಹಾವೇರಿ ಜಿಲ್ಲೆ, ರಾಣೆಬೆನ್ನೂರಿನಲ್ಲಿ ನಾಳೆ ಆಯೋಜಿತ ಖಾಸಗಿ ಕಾರ್ಯಕ್ರಮದಲ್ಲಿ, ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಭಾಗವಹಿಸಲಿದ್ದಾರೆ ಎಂದು ಜಿಲ್ಲಾಧಿಕಾರಿ ವಿಜಯಮಹಾಂತೇಶ ದಾನಮ್ಮನವರ ತಿಳಿಸಿದ್ದಾರೆ.

<><><>

ರಾಯಚೂರು ಜಿಲ್ಲಾಧಿಕಾರಿ ಕೆ.ನಿತೀಶ್, ಲಿಂಗಸೂಗೂರು ಸಾರ್ವಜನಿಕ ಆಸ್ಪತ್ರೆಗೆ ಭೇಟಿ ನೀಡಿ, ಪರಿಶೀಲಿಸಿದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- 'ನರೇಗಾ ಹಬ್ಬ': ಚಿಕ್ಕಬಳ್ಳಾಪುರದ ಮಂಡಿಕಲ್ಲು, ರಾಜ್ಯದ ಅತ್ಯುತ್ತಮ ಗ್ರಾಮ ಪಂಚಾಯ್ತಿ ಪುರಸ್ಕಾರಕ್ಕೆ ಭಾಜನ.
- 'ಗಾಂಧಿ ಭಾರತ': ಅಕ್ಟೋಬರ್ 2, ಗಾಂಧಿ ಜಯಂತಿ ವರೆಗೆ, 28 ವಿಶೇಷ ಕಾರ್ಯಕ್ರಮಗಳಿಗೆ, ರಾಜ್ಯ ಸರ್ಕಾರದಿಂದ ಚಾಲನೆ.
- ಭಾವ ಧ್ವನಿಸಬಲ್ಲ, ವಿಶೇಷ ಕನ್ನಡ ತಂತ್ರಾಂಶ ಹಾಗೂ ಲಿಪಿಗಳ ವಿನ್ಯಾಸಕ್ಕೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಸಿದ್ಧತೆ.
- ರಾಷ್ಟ್ರೀಯ ರಸ್ತೆ ಸುರಕ್ಷತೆ ಜಾಗೃತಿ ಮಾಸಾಚರಣೆ: ಧಾರವಾಡ ಜಿಲ್ಲೆಗೆ, ರಸ್ತೆ ಅಪಘಾತದಲ್ಲಿ, ರಾಜ್ಯಕ್ಕೆ 15ನೇ ಸ್ಥಾನ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>